**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 738/2020**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | **ಕುಮಾರ್** |
| ತಂದೆಯ ಹೆಸರು | **ರಂಗೇಗೌಡ** |
| ವಯಸ್ಸು | **55** |
| ಉದ್ಯೋಗ | **ಕೂಲಿ ಕೆಲಸ** |
| ವಿಳಾಸ | **ಕಮ್ಮಸಂದ್ರ** |

**ದಿನಾಂಕ:22-05-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

**ನಾನು** ಚಾಸಾ-2 ರವರು ಬಳಿ ಕೆಲಸವನ್ನು ಮಾಡುತ್ತಿದ್ದೇನೆ. ಚಾಸಾ-3 ರವರು ನನ್ನ ಜೊತೆಯಲ್ಲಿ ಕೆಲಸವನ್ನು ಮಾಡುತ್ತಿದ್ದರು. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಯಾರು ಎಂದು ಗೊತ್ತಿಲ್ಲ. ಯಾರೋ ಬಂದು ನನಗೆ ಹೊಡೆದಿರುವ ವಿಷಯಕ್ಕೆ ಸಂಬಂಧಿಸಿದಂತೆ ನಾನು ದೂರನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿ ಇರುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ. ನನಗೆ ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೋಲೀಸರು ಯಾರು ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ಯಾವುದೇ ಮರು ಹೇಳಿಕೆಯನ್ನು ನೀಡಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನೀವು ಚಾಸಾ-2 ರವರ ಮಾಲೀಕತ್ವದ ಸಮೃದ್ಧಿ ಗ್ರೀನ್ ಪಾರ್ಕ್ ಡಾಬದಲ್ಲಿ ಅಡಿಗೆ ಭಟ್ಟರಾಗಿ ಕೆಲಸ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.05-12-2019 ರಂದು ಈ ಮೇಲೆ ಹೇಳಿರುವ ಡಾಬದಲ್ಲಿ ಮಧ್ಯಾಹ್ನ 3.45 ರ ಸಮಯದಲ್ಲಿ ಯಾರೋ ಕಸ್ಟಮರ್ ಇಲ್ಲದೇ ಇದ್ದ ಕಾರಣ ನೀವು ಡಾಬದ ಮುಂಭಾಗ ಪಾರ್ಕಿಂಗ್ ಗೇಟ್ ಬಳಿ ಚಾಸಾ-3 ರವರ ಜೊತೆಯಲ್ಲಿ ಕ್ಲೀನಿಂಗ್ ಕೆಲಸವನ್ನು ಮಾಡುತ್ತಾ ಮಾಡುತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗ 4 ಜನರು ಡಾಬಗೆ ಬಂದರು ಮತ್ತು ಅವರಲ್ಲಿ ಇಬ್ಬರು ಈ ಹಿಂದೆ ಡಾಬಗೆ ಆಗಾಗ ಬರುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅವರು 1 ಮತ್ತು 2 ನೇ ಆರೋಪಿಗಳು ಆಗಿರುತ್ತಾರೆ ಮತ್ತು ಉಳಿದವರ ಹೆಸರು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆ 4 ಜನರು ಮದ್ಯಪಾನ ಮಾಡಿದ್ದರು ಮತ್ತು ಊಟ ಇದೆಯಾ ಎಂದು ನಿಮ್ಮನ್ನು ಕೇಳಿದರು ಆಗ ನೀವು ನಾನೇ ಅಡಿಗೆ ಭಟ್ಟ ಕುಳಿತುಕೊಳ್ಳಿ ಎಂದು ಹೇಳಿದಾಗ ಅವರು ನಿಮಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅವರು ನಿಮ್ಮನ್ನು ಅಡ್ಡಗಟ್ಟಿ ಹಿಡಿದುಕೊಂಡು ಕೈಯಿಂದ ಮತ್ತು ಕಾಲಿನಿಂದ ಹೊಡೆದು ಒದ್ದು ಕೆಳಗೆ ಹಾಕಿಕೊಂಡು ತುಳಿದು ಅಲ್ಲೆ ಬಿದ್ದಿದ್ದ ಕಲ್ಲಿಂದ 2 ನೇ ಆರೋಪಿಯು ನಿಮ್ಮ ಮೂಗಿಗೆ ಗುದ್ದಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗ ನಿಮಗೆ ರಕ್ತ ಬಂದಿರುತ್ತದೆ ಮತ್ತು ಬಿಡಿಸಲು ಬಂದ ಚಾಸಾ-2 ರವರಿಗೆ ಕೈಗಳಿಂದ ಹೊಡೆದು ಗಲಾಟೆ ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗ ನಿಮ್ಮಂತೆ ಕೆಲಸ ಮಾಡುತ್ತಿದ್ದ

ಶಶಿಕುಮಾರ್ ಮತ್ತು ಶೇಖರ್ ರವರು ಜಗಳವನ್ನು ಬಿಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆ 4 ಜನರು ನಿಮಗೆ ಮತ್ತು ಚಾಸಾ-2 ರವರಿಗೆ ಕೊಲೆ ಬೆದರಿಕೆ ಹಾಕಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ತಕ್ಷಣ ಚಾಸಾ-2 ಮತ್ತು ಇತರರು ನಿಮ್ಮನ್ನು ಉಪಚರಿಸಿ ಯಾವುದೋ ವಾಹನದಲ್ಲಿ ತಾವರೆಕೆರೆಯ ಸುವೈದ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ರಥಮ ಚಿಕಿತ್ಸೆಯನ್ನು ಕೊಡಿಸಿದ ನಂತರ ನೆಲಮಂಗಲದ ಮಾಗ್ನಿಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅದೇ ದಿನ ರಾತ್ರಿ ನಿಮ್ಮನ್ನು ವಾಪಸ್ಸು ಕರೆದುಕೊಂಡು ಅಮ್ಮಾ ಆಸ್ಪತ್ರೆಯಲ್ಲಿ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗಾಗಿ ನೀವು ತಡವಾಗಿ ದಿ.06-12-2019 ರಂದು ನಿಪಿ-1 ರಂತೆ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ನಿಪಿ-1 ರ ಆಧಾರದ ಮೇಲೆ ದಿ.06-12-2019 ರಂದು ಸಂಜೆ 4 ರಿಂದ 4.45 ರ ಸಮಯದಲ್ಲಿ ನೀವು ತೋರಿಸಿದ ಜಾಗದಲ್ಲಿ ಪೋಲೀಸರು ಪಂಚನಾಮೆಯನ್ನು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಗೆ ನಿಮ್ಮ ಜೊತೆಯಲ್ಲಿ ಚಾಸಾ-2 ಮತ್ತು 4 ರವರು ಸಹಿಯನ್ನು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ಕಲ್ಲನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಸಾಕ್ಷಿಗೆ ಒಂದು ಕಲ್ಲನ್ನು ತೋರಿಸಿದ್ದು, ಅದನ್ನು ಪೋಲೀಸರು ಪಂಚನಾಮೆ ಮಾಡುವ ಸಮಯದಲ್ಲಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕಲ್ಲನ್ನು ಮುದ್ದೆ ಮಾಲು-1 ಎಂದು ಗುರುತಿಸಲಾಯಿತು. ದಿ.07-12-2019 ರಂದು ನೀವು ಆರೋಪಿಗಳು ಬಂದಿದ್ದರು ಮತ್ತು ಅವರ ಜೊತೆಯಲ್ಲಿ ಇನ್ನೊಬ್ಬರು ಇದ್ದರು ಮತ್ತು ಅವರು ಡಾಬಗೆ ಬಂದಿದ್ದ ಕಸ್ಟಮರ್ ಆಗಿರುತ್ತಾರೆ

ಎಂದು ಮರು ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನಿಮ್ಮ ಮೇಲೆ ಹಲ್ಲೆಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಘಟನೆ ನಡೆದು ಸುಮಾರು 6 ವರ್ಷ ಆಗಿರುವ ಕಾರಣದಿಂದ ನೀವು ಈ ಮೇಲೆ ಹೇಳಿರುವ ವಿಷಯವನ್ನು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಸಿ.ಡಿ.ಪಿ, ವಕೀಲರಿಂದಃ-**

01. ನಾನು ಈ ಮೇಲೇ ಹೇಳಿರುವ ಡಾಬದಲ್ಲಿ ಸುಮಾರು 20 ದಿನಗಳ ಕಾಲ ಕೆಲಸವನ್ನು ಮಾಡಿರುತ್ತೇನೆ. ಯಾವ ದಿನಾಂಕ ಮತ್ತು ಸಮಯದಲ್ಲಿ ಕೃತ್ಯವು ನಡೆದಿತ್ತು ಎಂದು ನನಗೆ ನೆನಪಿಲ್ಲ. ಚಾಸಾ-3, ಶಶಿಕುಮಾರ್ ಮತ್ತು ಶೇಖರ್ ರವರು ಸದರಿ ಡಾಬದಲ್ಲಿ ಎಷ್ಟು ವರ್ಷಗಳಿಂದ ಕೆಲಸವನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ, ಆದರೆ ತಾನು ಅಲ್ಲಿಗೆ ಹೋದಾಗ ಅವರು ಕೆಲಸವನ್ನು ಮಾಡುತ್ತಿದ್ದರು ಎನ್ನುತ್ತಾರೆ. ಗಲಾಟೆ ನಡೆಯುವ ಸಮಯದಲ್ಲಿ 4 ರಿಂದ 5 ಜನರು ಇದ್ದರು ಮತ್ತು ಅವರು ಯಾರು ಎಂದು ನನಗೆ ಗೊತ್ತಿಲ್ಲ. ಊಟಕ್ಕೆ ಹೋದ ಸಮಯದಲ್ಲಿ ಡಾಬದಲ್ಲಿ ಎಷ್ಟು ಜನರು ಇದ್ದರು ಎಂದರೆ ಸಾಕ್ಷಿಯು ಎರಡು ಟೇಬಲ್ ನಲ್ಲಿ ಜನರು ಇದ್ದರು ಎನ್ನುತ್ತಾರೆ. ಸದರಿ 2 ಟೇಬಲ್ ಜನರಿಗೆ ನೀವೇ ಅಡಿಗೆಯನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಡಾಬದಲ್ಲಿ ಕ್ಲಿನರ್ ಮತ್ತು ಸಪ್ಲೆಯರ್ ಇದ್ದರು. ಸಾಮಾನ್ಯವಾಗಿ ಡಾಬದಲ್ಲಿ ಕಸ್ಟಮರ್ ಗಳನ್ನು ಸಪ್ಲೆಯರ್ ಗಳು ಉಪಚರಿಸುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಹೇಳುವ ಹಾಗೆ ಯಾವುದೇ ಗಲಾಟೆಯು ನಡೆದಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತಾರೆ. ಯಾರು ನನಗೆ ಬೈದರು ಎಂದು ನನಗೆ ಗೊತ್ತಿಲ್ಲ. ನನ್ನನ್ನು ಯಾರು ಅಡ್ಡಗಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಕಲ್ಲಿನಿಂದ ನನಗೆ ಯಾರು ಹಲ್ಲೆಯನ್ನು

ಮಾಡಿದರು ಎಂದು ನನಗೆ ಗೊತ್ತಿಲ್ಲ. ನನ್ನ ಬಟ್ಟೆಗೆ ರಕ್ತದ ಕಲೆಗಳು ಆಗಿತ್ತು. ಸದರಿ ಬಟ್ಟೆಯನ್ನು ಪೋಲೀಸರು ವಶಪಡಿಸಿಕೊಂಡಿರುವುದಿಲ್ಲ. ಗಲಾಟೆಯು ನಡೆಯಿತು ಎಂದು ಹೇಳುವ ಸಮಯದಲ್ಲಿ ಚಾಸಾ-2, ಶಶಿಕುಮಾರ್ ಮತ್ತು ಶೇಖರ್ ರವರು ಇರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳು ನಿಮಗೆ ಯಾವುದೇ ಕೊಲೆ ಬೆದರಿಕೆಯನ್ನು ಹಾಕಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

02. ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುವ ಬಗ್ಗೆ ನಾನು ಪೋಲೀಸರಿಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅಮ್ಮಾ ಆಸ್ಪತ್ರೆಯಲ್ಲಿ ನಾನು ಸುಮಾರು 2 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನಾನು ಯಾವ ದಿನಾಂಕದಂದು ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

03. ಯಾವ ದಿನಾಂಕ ಮತ್ತು ಸಮಯದಲ್ಲಿ ಪೋಲೀಸರು ಪಂಚನಾಮೆಯನ್ನು ಮಾಡಲು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಇರುವ ವಿಷಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪಂಚನಾಮೆಗೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾವ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಮರು ಹೇಳಿಕೆಯನ್ನು ನೀಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಆರೋಪಿಗಳು ಮುದ್ದೆ ಮಾಲು-1 ರಿಂದ ನಿಮ್ಮ ಮೇಲೆ ಹಲ್ಲೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳಿಗೆ ತೊಂದರೆಯನ್ನು ಕೊಡುವ ಉದ್ದೇಶದಿಂದ ನೀವು ನಿಪಿ-1 ರಂತೆ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | |
| ತಂದೆಯ / ಗಂಡನ ಹೆಸರು | |
| ವಯಸ್ಸು | |
| ಉದ್ಯೋಗ | ವ್ಯವಸಾಯ |
| ವಿಳಾಸ | |

ದಿನಾಂಕಃ **07-03-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ -**

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

**ಪಾಟೀ ಸವಾಲು - ಆರೋಪಿ ಪರ ಶ್ರೀ.** ವಕೀಲರಿಂದ ಃ-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

ಸಾಕ್ಷಿಗೆ ಕನ್ನಡ ಬಾಷೆಯು ಬಾರದೇ ಇರುವ ಕಾರಣ ವಕೀಲರಾದ ಶ್ರೀಮತಿ. ಶೃತಿರವರನ್ನು ಅನುವಾದಕರಾಗಿ ನೇಮಕ ಮಾಡಲು ಮಾನ್ಯ ಎಪಿಪಿ ಮತ್ತು ಆರೋಪಿಯ ಪರ ವಕೀಲರು ಸಮ್ಮತಿಸಿರುತ್ತಾರೆ.

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ :3405/2021**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | **ಶಶಿಕಲಾ** |
| ಗಂಡನ ಹೆಸರು | **ಮಂಜುನಾಥ** |
| ವಯಸ್ಸು | **44** |
| ಉದ್ಯೋಗ | **ಹೊಂ ಗಾರ್ಡ್** |
| ವಿಳಾಸ | **ಬೆಂಗಳೂರು** |

**ದಿನಾಂಕಃ 09-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಚಾಸಾ-2 ರವರು ನನ್ನ ಮಗ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರುಗಳು ನಮ್ಮ ಗ್ರಾಮದವರು. ನನ್ನ ಮತ್ತು ಆರೋಪಿಗಳ ನಡುವೆ ಜಾಗದ ವಿಷಯಕ್ಕೆ ಸಂಬಂಧಿಸಿದಂತೆ ಸಣ್ಣಪುಟ್ಟ ಮನಸ್ತಾಪವಾಗಿತ್ತು. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಪೋಲಿಸ್ ಠಾಣೆಗೆ ಹೋಗಿದ್ದಾಗ ಪೋಲಿಸರು ನನ್ನಿಂದ ಕೆಲವು ದಾಖಲಾತಿಗಳಿಗೆ ಸಹಿ ಪಡೆದುಕೊಂಡರು. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನನಗೆ ನಿಪಿ-1 ಮತ್ತು 2 ರಲ್ಲಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿನಾಂಕಃ 04-05-2021 ರಂದು ರಾತ್ರಿ ಸುಮಾರು 7.30 ರ ಸಮಯದಲ್ಲಿ ನೀವು ಕೆಲಸಕ್ಕೆ ಹೋಗಿ ಬಂದು ಮನೆಯ ಹೊರಗಡೆ ನೀವು ಮತ್ತು ಚಾಸಾ-2 ರವರು ಆಂಜೀನಯ ದೇವಸ್ಥಾನದ ಹತ್ತಿರ ನಡೆದುಕೊಂಡು ಹೋಗಿರುತ್ತೀರಿ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆ ಸಮಯದಲ್ಲಿ 1 ನೇ ಆರೋಪಿ ಮತ್ತು ಆತನ ಸ್ನೇಹಿತರು ಕುಡಿದು ಗಾಡಿಯಲ್ಲಿ ಒಟ್ಟು 15 ಜನ ಬಂದು ಗಾಡಿ ನಿಲ್ಲಿಸಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. 1 ನೇ ಆರೋಪಿಯು ನಿನಗೆ ರೋಡಿನಲ್ಲಿ ಓಡಾಡಲು ಅನುಮತಿ ಕೊಟ್ಟಿದ್ದು, ಯಾರನ್ನು ಹುಡುಕಿಕೊಂಡು ಬಂದಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಿಮ್ಮನ್ನು ಹೊಡೆದು ನಿಮ್ಮ ಬಟ್ಟೆಯನ್ನು ಹರಿದು ನಿಮ್ಮ ಮೈಯನ್ನು ಮುಟ್ಟಿ ಅವಮಾನ ಮಾಡಿ ಮದ್ಯ ರೋಡಿನಲ್ಲಿ ಮಾನ ಹಾನಿ ಮಾಡಲು ಪ್ರಯತ್ನಿಸಿದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆಗ ಚಾಸಾ-2 ರವರು ಕೇಳಲು ಹೋದಾಗ ಅವರಿಗೂ ಸಹ ಮುಖದ ಮೇಲೆ ಕೈಯಿಂದ ಗುದ್ದಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ದಿನಾಂಕಃ 05-05-2021 ರಂದು ನಿಪಿ-1 ರಂತೆ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

2. ನಿಪಿ-1 ರ ಆಧಾರದ ಮೇಲೆ ದಿನಾಂಕಃ 05-05-2021 ರಂದು ಸಂಜೆ 5.15 ರಿಂದ 6 ಗಂಟಯವರೆಗೆ ಪೋಲಿಸರು ನಿಪಿ-2 ರಂತೆ ಪಂಚನಾಮೆ ಮಾಡಿ, ನಿಮ್ಮ, ಚಾಸಾ-3 ಮತ್ತು 4 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸದರಿ ವಿಷಯದ ಬಗ್ಗೆ ಎಲ್ಲಾ ಮಾಹಿತಿ ತಿಳಿದಿದ್ದರೂ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ

ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀಮತಿ. ಎನ್.ಸಿ.ಎಂ. ವಕೀಲರಿಂದಃ-**

**ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ :3405/2021**
**ಚಾಸಾ - 02 / ಪ್ರಾಸಾ - 02**

| | |
|---|---|
| ಹೆಸರು | **ಹರ್ಷವರ್ಧನಗೌಡ** |
| ತಂದೆಯ ಹೆಸರು | **ನಾಗರಾಜು** |
| ವಯಸ್ಸು | **23** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ತಾವರೆಕೆರೆ** |

**ದಿನಾಂಕಃ 09-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಚಾಸಾ-1 ನನ್ನ ತಾಯಿ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರುಗಳು ನಮ್ಮ ಗ್ರಾಮದವರು. ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಸಾಕ್ಷಿಗೆ ತಾನು ನೀಡಿರುವ ಹೇಳಿಕೆಯ ಭಾಗವಾದ "ನಾನು ಮೇಲ್ಕಂಡ ವಿಳಾಸದಲ್ಲಿ --------------- ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ "ಓದಿ ತಿಳಿಸಲಾಯಿತು. ಸಾಕ್ಷಿಯು ತಾನು ನೀಡಿರುವ ಹೇಳಿಕೆಯನ್ನು ಮತ್ತು ದೂರನ್ನು ಅಲ್ಲಗಳೆದಿರುತ್ತಾರೆ. ಸದರಿ ಹೇಳಿಕೆಯನ್ನು ನಿಪಿ-3 ಎಂದು

ಗುರುತಿಸಲಾಯಿತು. ಆರೋಪಿಯು ನಿಮ್ಮ ಮಗನಾದ ಕಾರಣದಿಂದ ಸದರಿ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀಮತಿ. ಎನ್.ಸಿ.ಎಂ. ವಕೀಲರಿಂದಃ-**

ಆರೋಪಿಯ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**